ಪ್ಲಾಂಟೇಶನ್ (ತಿದ್ದುಪಡಿ) ಕಾಯಿದೆ ೧೯೫೨ರ ಅನ್ವಯ ನಿಯಮಗಳನ್ನು ಹೊರಡಿಸುವ ಬಗ್ಗೆ

೬೮ (೨೬೪) ಶ್ರೀ ಟಿ. ಎಸ್. ಮಣಿ.—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ :—

ಪ್ಲಾಂಟೇಶನ್ ಕಾಯಿದೆ ೧೯೫೨ರ ಅಡಿಯಲ್ಲಿ ನಿಯಮಗಳನ್ನು ರಚಿಸಿ ಪ್ರಕಟಿಸದೆ ಇರುವುದಕ್ಕೆ ಕಾರಣಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಿ ಸದರಿ ನಿಯಮಗಳನ್ನು ಪ್ರಕಟಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ನಾನು ಈಗಾಗಲೇ ಅವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಇನ್ನೂ ಒಂದು ಹೆಚ್ಚಿನ ಮುಂದೆ ಹೋಗಿ ಹೇಳುವುದಾದರೆ ೧೯೬೧ನೇ ಇಸವಿಯ ಪ್ಲಾಂಟೇಷನ್ ಕಾಯಿದೆ ಪ್ರಕಾರ ಕೇಂದ್ರ ಸರ್ಕಾರ ದವರು ಕೆಲವು ವಿವರಗಳನ್ನು ಕೇಳಿದ್ದಾರೆ. ಆ ಬಗ್ಗೆ ವಿವರಗಳನ್ನು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರು ಈಗಾಗಲೇ ಅವರ ಒಪ್ಪಿಗೆಗಾಗಿ ಕಳುಹಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯವನ್ನೂ ಸಹ ಪಡೆದಿದ್ದೇನೆ. ಇನ್ನು ಎರಡು ವಾರದೊಳಗಾಗಿ ಅದನ್ನು ಪಬ್ಲಿಷ್ ಮಾಡುತ್ತೇವೆ. ಇದನ್ನೇನಾದರೂ ಪಬ್ಲಿಷ್ ಮಾಡುವುದಕ್ಕೆ ಅವರಿಂದ ಒತ್ತಾಯ ಏನಾದರೂ ಇದೆಯೇ ?

ಶ್ರೀ ಆರ್. ವೆಂಕಟರಾಮಯ್ಯ (ಶ್ರೀ ಟಿ. ಎಸ್. ಮಣಿ ಅವರ ಪರವಾಗಿ).—ಎರಡು ವಾರ ಅಲ್ಲ ಒಂದು ತಿಂಗಳು ಆಗಲಿ. ಈಗ ಇದನ್ನು ಹಿಂದಕ್ಕೆ ಪಡೆದು ೬ ವರ್ಷವಾಯಿತು. ೬ ವರ್ಷ ದಿಂದಲೂ ತಳ್ಳುತ್ತಾ ಇದ್ದೀರಿ. ಇದರಲ್ಲಿ ಒಂದು ವಿಷಯ ಏನೆಂದರೆ ಈ ಪ್ಲಾಂಟೇಷನ್ ಯಜಮಾನರು ಒತ್ತಾಯ ಮಾಡಿ, ಅವರು ತಮ್ಮ ಸ್ವಂತ ಲಾಭ ಮಾಡಿಕೊಳ್ಳುವುದಕ್ಕಾಗಿ ಇದು ನಡೆಯದಂತೆ ಮಾಡುತ್ತಾ ಇದ್ದಾರೆ. ಆದುದರಿಂದ ಇದನ್ನು ಎರಡು ವಾರದೊಳಗೆ ಪಬ್ಲಿಷ್ ಮಾಡುತ್ತೀರಾ ಇಲ್ಲವೇ ಸುಮ್ಮನೆ ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸುಮ್ಮನೆ ಹೇಳುವುದಿಲ್ಲ. ನಾನು ಈಗಾಗಲೇ ಹೇಳಿದ ಹಾಗೆ ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಬೇಕಾಗಿತ್ತು. ಅವರು ನಮ್ಮನ್ನು ಕೆಲವು ವಿವರ ಗಳನ್ನು ಕೇಳಿದ್ದರು. ಈಗ ಆ ವಿವರಗಳನ್ನು ಕಳುಹಿಸಿ ಅವರ ಒಪ್ಪಿಗೆಯನ್ನು ಪಡೆಯಲಾಗಿದೆ. ಇನ್ನು ಎರಡು ವಾರದೊಳಗೆ ಪಬ್ಲಿಷ್ ಮಾಡುತ್ತೇವೆ. ಇದಕ್ಕೆ ಯಾರ ಒತ್ತಾಯವೂ ಇಲ್ಲ, ಏನೂ ಇಲ್ಲ.

ಅಧ್ಯಕ್ಷರು.—ಪ್ರಶ್ನೆ ೬೯(೪೭೭) ಶ್ರೀ ಜಿ. ರಾಮದಾಸ್ ಅವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಪ್ರಶ್ನೆ ೭೦ (೧೦) ಶ್ರೀ ಬಾಬುರೆಡ್ಡಿ ವಿ. ತುಂಗಲ್—ಸದಸ್ಯರು ಹಾಜರಿಲ್ಲ.

ಪ್ರಶ್ನೆ ೭೧ (೨೫೭) ಶ್ರೀ ಮದನಗೋಪಾಲ ನಾಯ್ಕ—ಸದಸ್ಯರು ಹಾಜರಿಲ್ಲ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಅಧ್ಯಕ್ಷರೇ, ನನ್ನ ಪ್ರಶ್ನೆ ಬಿಟ್ಟುಹೋಗಿದೆ.

ಅಧ್ಯಕ್ಷರು.—ತರಿಸಿಕೊಡುತ್ತೇನೆ. ಮುಂದಿನ ಪ್ರಶ್ನೆ ಕೇಳಿ.

ದಕ್ಷಿಣ ಕನ್ನಡದಲ್ಲಿ ಬೀಡಿ ವ್ಯವಸಾಯ

೭೨ (೧೯೩) ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣಕನ್ನಡ ಜಿಲ್ಲೆಯಲ್ಲಿ ೧೯೬೫-೬೬ರಲ್ಲಿ ಒಟ್ಟು ಬೀಡಿ ಮಾಲೀಕರು, ಬೀಡಿ ಕಂಟ್ರಾಕ್ಟರರು ಹಾಗೂ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು ?